ಕರ್ನಾಟಕ ಸರ್ಕಾರ

# ಆಯುಕ್ತರ ಕಛೇರಿ, ಸಾರ್ವಜನಿಕ ಶಿಕ್ಷಣ ಇಲಾಖೆ,

# ಹೊಸ ಸಾರ್ವಜನಿಕ ಕಟ್ಟಡ, ನೃಪತುಂಗ ರಸ್ತೆ, ಬೆಂಗಳೂರು-01.

ಸಂಖ್ಯೆ: ಸಿ3(7)ಪ್ರಾ..ಶಿ:ವರ್ಗ:ವೈ.ತ:02/2016-17 ದಿನಾಂಕ:-31-8-2016

ರಾಜ್ಯದ ಎಲ್ಲಾ ಉಪನಿರ್ದೇಶಕರು(ಆಡಳಿತ)/ಕ್ಷೇತ್ರಶಿಕ್ಷಣಾಧಿಕಾರಿಗಳು
ಸಾರ್ವಜನಿಕ ಶಿಕ್ಷಣ ಇಲಾಖೆ,

ವಿಷಯ:- ಸರ್ಕಾರಿ ಪ್ರಾಥಮಿಕ ಮತ್ತು ಪ್ರೌಢಶಾಲಾ ಶಿಕ್ಷಕರ ವರ್ಗಾವಣೆ ಆದ್ಯತೆ ಸಂಬಂಧ "ತೀವ್ರ ಅನಾರೋಗ್ಯದಿಂದ ಬಳಲುತ್ತಿರುವ" ಶಿಕ್ಷಕರು ಮತ್ತು ಅವರ [ಪತಿ ಅಥವಾ ಪತ್ನಿ, ಮಕ್ಕಳು] ಅವಲಂಬಿತರ ಪ್ರಕರಣಗಳಿಗೆ ಜಿಲ್ಲಾ ವೈದ್ಯಕೀಯ ಮಂಡಳಿಯಿಂದ ನೀಡಿರುವ ವೈದ್ಯಕೀಯ ಪ್ರಮಾಣ ಪತ್ರಗಳ ಬಗ್ಗೆ ವಿಭಾಗ ಮಟ್ಟದಲ್ಲಿ ತ್ರಿ ಸದಸ್ಯ ಸಮಿತಿಗೆ ಶಿಕ್ಷಕರನ್ನು ತಪಾಸಣೆಗೆ ಹಾಜರುಪಡಿಸಿ ವೈದ್ಯಕೀಯ ಪ್ರಮಾಣ ಪತ್ರದ ನೈಜತೆಯ ದಾಖಲೆಗಳನ್ನು ಪರಿಶೀಲಿಸುವ ಬಗ್ಗೆ:

ಉಲ್ಲೇಖ:- . ಈ ಕಚೇರಿ ಅಧಿಕೃತ ಜ್ಞಾಪನಾ ಪತ್ರ ಸಂಖ್ಯೆ ಸಿ3(7) ಪ್ರಾ.ಶಾ.ಶಿವರ್ಗಾ01/16-17 ದಿ:01.8.2016 ಹಾಗೂ ಸಿ4(7) ಪ್ರೌ.ಶಿ.ವರ್ಗ01/16-17 ದಿ: 02.08.2016 ಹಾಗೂ ಸಂಬಂಧಿತ ಜ್ಞಾಪನಗಳು.

2 ಆಯುಕ್ತರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳ ಆಯುಕ್ತಾಲಯ, ಆನಂದರಾವ್ ವೃತ್ತ, ಬೆಂಗಳೂರು ಇವರ ಪತ್ರ ಸಂಖ್ಯೆ: ಎಂ.ಡಿ.ಎಕ್ಸ್(2)322/2015-16 ದಿನಾಂಕ: 24-8-2016.

-*****-

2016-17 ನೇ ಸಾಲಿನ ಅಂತರ್ ಘಟಕ ವರ್ಗಾವಣೆ ಬಯಸಿ ಅರ್ಜಿ ಸಲ್ಲಿಸಿರುವ ಸರ್ಕಾರಿ ಪ್ರಾಥಮಿಕ ಮತ್ತು ಪ್ರೌಢ ಶಾಲಾ ಶಿಕ್ಷಕರ(ಅವಲಂಬಿತರನ್ನೊಳಗೊಂಡಂತೆ) ತೀವ್ರತರ ಕಾಯಿಲೆ ಪ್ರಕರಣದಲ್ಲಿ (ಕ್ಯಾನ್ಸರ್, ಕಿಡ್ನಿ ವೈಫಲ್ಯ, ಹೃದಯ ಸಂಬಂಧಿ ಹಾಗೂ ಹೆಚ್.ಐ.ವಿ ಕಾಯಿಲೆಗಳಿಗೆ ಮಾತ್ರ)ಮತ್ತು ಅಂಗವಿಕಲ ಶಿಕ್ಷಕರುಗಳು ದಿನಾಂಕ:02.09.2016 ರಿಂದ ದಿನಾಂಕ 12.09.2016 ರ ಒಳಗಾಗಿ ಯಾವ ವಿಭಾಗದಲ್ಲಿ ಕೌನ್ಸಿಲಿಂಗ್ ಮೂಲಕ ವರ್ಗಾವಣೆ ಪಡೆಯಲು ಅರ್ಜಿ ಸಲ್ಲಿಸಿರುತ್ತಾರೋ ಅದೇ ವಿಭಾಗದಲ್ಲಿ ನಿರ್ಧಿಷ್ಟಪಡಿಸಿದ ಆಸ್ಪತ್ರೆಗಳಲ್ಲಿ ವೈದ್ಯಕೀಯ ತಪಾಸಣೆಗೆ ಹಾಜರಾಗುವುದು. ಈ ಸಂಬಂಧ ಉಪನಿರ್ದೇಶಕರು ಸಾ.ಶಿ.ಇ ಮತ್ತು ಕ್ಷೇತ್ರಶಿಕ್ಷಣಾಧಿಕಾರಿಗಳು ಶಿಕ್ಷಕರುಗಳಿಗೆ ದೂರವಾಣಿ ಮತ್ತಿತರೆ ಮಾಧ್ಯಮದ ಮುಖಾಂತರ ಸೂಚಿಸುವುದು ಮತ್ತು ಕಛೇರಿ ಸೂಚನಾ ಫಲಕದಲ್ಲಿ ಪ್ರಕಟಿಸುವುದು. ವೈದ್ಯಕೀಯ ಪ್ರಕರಣದಡಿ ವರ್ಗಾವಣೆ ಕೋರುತ್ತಿರುವ ಶಿಕ್ಷಕರು/ಅವಲಂಬಿತರಾಗಿದ್ದಲ್ಲಿ ಶಿಕ್ಷಕರೊಂದಿಗೆ ಅಗತ್ಯ ಗುರುತಿನ ಚೀಟಿ ಮತ್ತು ಅಗತ್ಯ ದಾಖಲೆಗಳ ಸಹಿತ ಹಾಗೂ ಶಿಕ್ಷಕರು ಕರ್ತವ್ಯ ನಿರ್ವಹಿಸುತ್ತಿರುವ ಆಯಾ ಜಿಲ್ಲಾ ವೈದ್ಯಕೀಯ ತ್ರಿಸದಸ್ಯ ಮಂಡಳಿಯಿಂದಲೇ ಪಡೆದ ಪ್ರಮಾಣ ಪತ್ರದ ಸಮೇತ ಖುದ್ದು ಹಾಜರಾಗಿ ವೈದ್ಯಕೀಯ ತಪಾಸಣೆಗೆ ಒಳಗಾಗುವುದು.

ಉಲ್ಲೇಖ(2)ರನ್ವಯ ಮಾನ್ಯ ಆಯುಕ್ತರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು ಬೆಂಗಳೂರು ರವರು ಈಗಾಗಲೇ ಆಯಾ ವಿಭಾಗೀಯ ಮಟ್ಟದಲ್ಲಿ ವೈದ್ಯಕೀಯ ಮಂಡಳಿ ರಚಿಸಿ ವರದಿ ನೀಡಲು ಸೂಚಿಸಿರುತ್ತಾರೆ. (ಪ್ರತಿ ಲಗತ್ತಿಸಿದೆ).

ವರ್ಗಾವಣಾ ಕೌನ್ಸಿಲಿಂಗ್‌ಗೆ ಹಾಜರಾಗುವ ಶಿಕ್ಷಕರುಗಳು ಅವರು ಕರ್ತವ್ಯ ನಿರ್ವಹಿಸುತ್ತಿರುವ ವಿಭಾಗದ ನಿರ್ದೇಶಕರ ಕಛೇರಿಯಲ್ಲಿ ನೇಮಿಸಲಾಗಿರುವ ನೋಡಲ್ ಅಧಿಕಾರಿಗಳನ್ನು ಸಂಪರ್ಕಿಸುವುದು. ಸದರಿ ನೋಡಲ್ ಅಧಿಕಾರಿಯವರು, ವಿಭಾಗೀಯ ಮಟ್ಟದ ತಪಾಸಣೆಗೆ ನಿಗಧಿಪಡಿಸಲಾಗಿರುವ ಆಸ್ಪತ್ರೆಯಲ್ಲಿ ಸದರಿ ಎಲ್ಲಾ ಶಿಕ್ಷಕರ ವೈದ್ಯಕೀಯ ತಪಾಸಣೆ ಕುರಿತಂತೆ ಅಗತ್ಯ ಕ್ರಮ ವಹಿಸುವುದು. ತಪಾಸಣೆ ಮುಗಿದ ನಂತರ ಯಾವ ವಿಭಾಗಕ್ಕೆ ವರ್ಗಾವಣೆ ಕೋರಿ ಅರ್ಜಿ ಸಲ್ಲಿಸಿರುತ್ತಾರೋ ಆ ವಿಭಾಗದಲ್ಲಿ ಕೌನ್ಸಿಲಿಂಗ್‌ಗೆ ಹಾಜರಾಗಲು ಸೂಚಿಸುವುದು ಹಾಗೂ ವಿಭಾಗ ಮಟ್ಟದ ವೈದ್ಯಕೀಯ ಮಂಡಳಿಯು ತಪಾಸಣೆ ಮಾಡಿದ ನಂತರ ವಿತರಿಸುವ ಎಲ್ಲ ಪ್ರಕರಣಗಳ ವೈದ್ಯಕೀಯ ಪ್ರಮಾಣ ಪತ್ರಗಳನ್ನು ಪಡೆದು, ಸದರಿ ನೋಡಲ್ ಅಧಿಕಾರಿಯವರು ಸಂಬಂಧಪಟ್ಟ ವರ್ಗಾವಣಾ ಪ್ರಾಧಿಕಾರಕ್ಕೆ, ದಿನಾಂಕ: 13.09.2016 ರ ಒಳಗಾಗಿ ತಲುಪುವಂತೆ ಮುದ್ದಾಂ ಸಲ್ಲಿಸತಕ್ಕದ್ದು. ಆಯಾ ಶಿಕ್ಷಕರಿಗೆ ಸದರಿ ಪ್ರಮಾಣ ಪತ್ರದ ದೃಢೀಕೃತ ಪ್ರತಿಯನ್ನು ವಿತರಿಸಿ ಕೌನ್ಸಿಲಿಂಗ್ ಸಂದರ್ಭದಲ್ಲಿ ಹಾಜರುಪಡಿಸಲು ಸೂಚಿಸತಕ್ಕದ್ದು.

(ಸೌಜನ್ಯ ಪ್ರಾ.ಆ.ಸೇ)
ಆಯುಕ್ತರು
ಸಾರ್ವಜನಿಕ ಶಿಕ್ಷಣ ಇಲಾಖೆ

ಪ್ರತಿಯನ್ನು:

1. ಅಪರ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಕಲ್ಬುರ್ಗಿ/ಧಾರವಾಡ ರವರ ಸೂಕ್ತ ಕ್ರಮಕ್ಕಾಗಿ.
2. ರಾಜ್ಯದ ವಿಭಾಗೀಯ ಸಹನಿರ್ದೇಶಕರು, ಸಾ.ಶಿ.ಇ ಬೆಂಗಳೂರು/ಮೈಸೂರು/ಧಾರವಾಡ/ಕಲಬುರ್ಗಿ ಸೂಕ್ತ ಕ್ರಮಕ್ಕಾಗಿ ಕಳುಹಿಸಿದೆ.

3. ನಿರ್ದೇಶಕರು ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ, ಸಾ.ಶಿ.ಇ ಆಯುಕ್ತರ ಕಛೇರಿ, ಬೆಂಗಳೂರು ರವರ ಸೂಕ್ತ ಕ್ರಮಕ್ಕಾಗಿ ಕಳುಹಿಸಿದೆ.
4. ನಿರ್ದೇಶಕರು, ಸಾರ್ವಜನಿಕ ಶಿಕ್ಷಣ ಇಲಾಖೆ, ಕಲ್ಬುರ್ಗಿ/ಧಾರವಾಡ ರವರ ಸೂಕ್ತ ಕ್ರಮಕ್ಕಾಗಿ.
5. ಸಭಾಪತಿಯವರು ವೈದ್ಯಕೀಯ ಮಂಡಳಿ. ವಿಕ್ಟೋರಿಯಾ ಆಸ್ಪತ್ರೆ, ಬೆಂಗಳೂರು/ಕೆ.ಆರ್. ಆಸ್ಪತ್ರೆ ಮೈಸೂರು/ಜಿಲ್ಲಾ ಆಸ್ಪತ್ರೆ ಬೆಳಗಾವಿ/ಜಿಲ್ಲಾ ಆಸ್ಪತ್ರೆ ಕಲಬುರ್ಗಿ ಇವರುಗಳಿಗೆ ಸೂಕ್ತ ಕ್ರಮಕ್ಕಾಗಿ.
6. ಕಛೇರಿ ಪ್ರತಿ.

ಕರ್ನಾಟಕ ಸರ್ಕಾರ

## ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳ ಆಯುಕ್ತಾಲಯ ಬೆಂಗಳೂರು- 09

ಸಂಖ್ಯೆ:ಎಂ.ಡಿ.ಎಕ್ಸ್(2)/322/2015-16 ದಿನಾಂಕ: 24-08-2016

E.M.S.

ರವರಿಗೆ,

ಸಭಾಪತಿಯವರಿಗೆ, ವೈದ್ಯಕೀಯ ಮಂಡಳಿ,
ವಿಕ್ಟೋರಿಯಾ ಆಸ್ಪತ್ರೆ, ಬೆಂಗಳೂರು
ಕೆ.ಆರ್.ಆಸ್ಪತ್ರೆ, ಮೈಸೂರು
ಜಿಲ್ಲಾ ಆಸ್ಪತ್ರೆ ಬೆಳಗಾಂ
ಜಿಲ್ಲಾ ಆಸ್ಪತ್ರೆ ಗುಲ್ಬರ್ಗಾ

175475
31.8.16

ವಿಷಯ:- ಸರ್ಕಾರಿ ಪ್ರಾಥಮಿಕ ಮತ್ತು ಪ್ರೌಢಶಾಲಾ ಶಿಕ್ಷಕರ ವರ್ಗಾವಣೆ ಆದ್ಯತೆ ಸಂಬಂಧ "ತೀವ್ರ ಅನಾರೋಗ್ಯದಿಂದ ಬಳಲುತ್ತಿರುವ" ಶಿಕ್ಷಕರು ಮತ್ತು ಅವರ (ಪತಿ ಅಥವಾ ಪತ್ನಿ, ಮಕ್ಕಳು) ಅವಲಂಭಿತರ ಪ್ರಕರಣಗಳಿಗೆ ವೈದ್ಯಕೀಯ ಪ್ರಮಾಣ ಪತ್ರಗಳನ್ನು ವಿಭಾಗೀಯ ಮಟ್ಟದ ತ್ರಿ-ಸದಸ್ಯ ಸಮಿತಿ ರಚಿಸಿ ವೈದ್ಯಕೀಯ ಪ್ರಮಾಣ ಪತ್ರ ನೀಡಲು ನಿರ್ದೇಶನ ನೀಡುವಂತೆ ಕೋರಿರುವ ಬಗ್ಗೆ.

ಉಲ್ಲೇಖ:- ಆಯುಕ್ತರು ಸಾರ್ವಜನಿಕ ಶಿಕ್ಷಣ ಇಲಾಖೆ ಇವರ ಪತ್ರ ಸಂ:
ಸಿ3(7)ಪ್ರಾ.ಶಿ:ವರ್ಗ:ವೈ.ತ:02/2015-16, ದಿ:17-08-2016 ಮತ್ತು
ಕಛೇರಿ ಪತ್ರ ಸಂಖ್ಯೆ: ಸಿ3(7)ಪ್ರಾ.ಶಾ.ಶಿವರ್ಗಾ01/16-17, ದಿ: 01-08-2016

*********

ಮೇಲಿನ ವಿಷಯ ಮತ್ತು ಉಲ್ಲೇಖಕ್ಕೆ ಸಂಬಂಧಿಸಿದಂತೆ, ಶಿಕ್ಷಕರ ವರ್ಗಾವಣೆ ನಿಯಮಗಳಲ್ಲಿ ಅತ್ಯಂತ ತೀವ್ರತರಹದ ಖಾಯಿಲೆಗಳಿಗೆ (ಕ್ಯಾನ್ಸರ್, ಕಿಡ್ನಿ ವೈಫಲ್ಯ, ಹೃದಯ ಸಂಬಂಧಿ ಹೆಚ್.ಐ.ವಿ. ಖಾಯಿಲೆಗಳಿಗೆ ಮಾತ್ರ) / ಶಿಕ್ಷಕರಿಗೆ / ಅವಲಂಭಿತರಿಗೆ / ಅಂಗವಿಕಲಶಿಕ್ಷಕರಿಗೆ / ವಿಭಾಗಿಯ ಮಟ್ಟದಲ್ಲಿ ಸಂಬಂಧಿಸಿದ ತಜ್ಞ ವೈದ್ಯರ ಸಹಿತ ವೈದ್ಯಕೀಯ ಮಂಡಳಿಯಿಂದ ವೈದ್ಯಕೀಯ ತಪಾಸಣೆ ನಡೆಸಿ, ತೀವ್ರತರ ಖಾಯಿಲೆಯಿಂದ ಬಳಲುತ್ತಿರುವ / ಶಿಕ್ಷಕರಿಗೆ ವೈದ್ಯಕೀಯ ಮಂಡಳಿಯಿಂದ ಪಡೆದ ವೈದ್ಯಕೀಯ ಪ್ರಮಾಣ ಪತ್ರಗಳ ವೈದ್ಯಕೀಯ ವರದಿಗಳ ಸತ್ಯಾಸತ್ಯತೆಯನ್ನು ಮತ್ತು ಖಾಯಿಲೆಯ ಸ್ವರೂಪವನ್ನು ಮರು ಪರಿಶೀಲಿಸಿ ವರದಿನೀಡುವಂತೆ ಉಲ್ಲೇಖ ಪತ್ರದಲ್ಲಿ ಕೋರಿರುತ್ತಾರೆ. (ಪತ್ರದ ಪ್ರತಿಗಳನ್ನು ಲಗತ್ತಿಸಿದೆ.)

ಆದುದರಿಂದ ಸದರಿ ಶಿಕ್ಷಕರಿಗೆ ಸಂಬಂಧಿಸಿದ ದಾಖಲಾತಿಗಳನ್ನು ಮರು ಪರಿಶೀಲಿಸಿ ವೈದ್ಯಕೀಯ ತಪಾಸಣೆಗೊಳಪಡಿಸಿ ಸಲ್ಲಿಸಿರುವ ಪ್ರಮಾಣ ಪತ್ರಗಳ ಸತ್ಯಾಸತ್ಯತೆಯ ಬಗ್ಗೆ, ಮತ್ತು ಖಾಯಿಲೆಯ ಬಗ್ಗೆ ವರದಿಯನ್ನು ನೀಡಲು ಕೋರಲಾಗಿದೆ. ನೌಕರರಿಗೆ / ಅವಲಂಭಿತರಿಗೆ ಆಯಾ ವಿಭಾಗಿಯ ಮಟ್ಟದಲ್ಲಿ ವೈದ್ಯಕೀಯ ಮಂಡಳಿ ರಚಿಸಿ ಉಲ್ಲೇಖ ಪತ್ರದಲ್ಲಿ ಸೂಚಿಸಿರುವಂತೆ ಆರೋಗ್ಯ ತಪಾಸಣೆಗೊಳಪಡಿಸಿ ವರದಿಯನ್ನು ಆಧ್ಯತೆಯ ಮೇಲೆ, ಜರೂರಾಗಿ ಆಯುಕ್ತರು ಸಾರ್ವಜನಿಕ ಶಿಕ್ಷಣ ಇಲಾಖೆ ನೃಪತುಂಗ ರಸ್ತೆ, ಬೆಂಗಳೂರು-01 ಇವರಿಗೆ ಕಳುಹಿಸಲು ಸೂಚಿಸಿದೆ.

ಸಹ ನಿರ್ದೇಶಕರು(ವೈದ್ಯಕೀಯ),
ಆರೋಗ್ಯ ಮತ್ತು ಕು ಕ ಸೇವೆಗಳು,
ಬೆಂಗಳೂರು

ಪ್ರತಿಯನ್ನು:-

1) ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ನೃಪತುಂಗ ರಸ್ತೆ, ಬೆಂಗಳೂರು-01